ಸ್ಯಾಮನ ಮನಸ್ಸಿನಲ್ಲಿ ಮದುವೆಯ ದೃಶ್ಯಾವಳಿಗಳು ಹಾದು ಹೋದವು, ಜನರು ಆಡಿದ ಮಾತುಗಳು ಮರುಕಳಿಸಿದವು. ಅವನಿಗೆ ಗೋಚರವಾಯಿತು, “ಈ ಭಾರತೀಯರಿಗೆ ವಿವಾಹ ಕೇವಲ ಹುಡುಗ ಹುಡುಗಿಯರ ನಡುವಿನ ಒಪ್ಪಂದವಲ್ಲ. ಎಲ್ಲಿಂದಲೋ ಹೊಸೆದು ತಂದ ಸಂಬಂಧ ಅದು. ಅವರ ಪ್ರಕಾರ ತಾರಾ ನನಗಾಗಿಯೇ ದೇವರು ನಿಯಮಿಸಿದ ಹುಡುಗಿ. ಬೇಡ ಎನಿಸಿದಾಗ, ‘ಇಲ್ಲಿಗೆ ಸಾಕು’ ಎಂದು ನಾವು ಈ ಸಂಬಂಧವನ್ನು ಮುರಿಯುವ ಹಾಗಿಲ್ಲ. ಇದರ ಇತಿಮಿತಿಗಳು ಏನೇ ಇರಲಿ, ನನ್ನ ಅಪ್ಪ, ಅಮ್ಮನಿಗೆ ಇಂತಹ ಭಾವನೆ ಕಿಂಚಿತ್ತಾದರೂ ಇದ್ದರೆ ಎಷ್ಟು ಚೆನ್ನಾಗಿತ್ತು! ಪ್ರಾಣಿಗಳಂತೆ ವರ್ತಿಸಿದರು!” ಎಂದುಕೊಂಡ.

ಒಂದು ಅಪಾರ್ಟ್‌ಮೆಂಟನ್ನು ಬಾಡಿಗೆಗೆ ಪಡೆದರು ಸ್ಯಾಮ್ ಮತ್ತು ತಾರಾ. ಅವಳ ತಾಯಿ ಶೀಲಾ ನವ ದಂಪತಿಗಳಿಗೆ ಸಂಸಾರ ಹೂಡುವಲ್ಲಿ ನೆರವಾದರು. ಇಷ್ಟು ದಿನ ಅವರನ್ನು “ಮಿಸಸ್ ಭಟ್” ಎಂದು ಕರೆಯುತ್ತಿದ್ದ ಸ್ಯಾಮ್ ಈಗ “ಶೀಲಾ” ಎಂದು ಕರೆಯಲಾರಂಭಿಸಿದ. ಮೊದಮೊದಲು ಕೇಳಿ ನಾಚಿದ ಶೀಲಾ ಬರಬರುತ್ತಾ ಅದಕ್ಕೆ ಹೊಂದಿಕೊಂಡರು.

ನವ ದಂಪತಿ ಸಂಸಾರ ಹೂಡುತ್ತಿದ್ದಂತೇ ಕುತೂಹಲದ ಸಂಗತಿ ನಡೆಯಿತು. ಸ್ಯಾಮನ ತಾಯಿ ಬೆಲಿಂಡಾ ತನ್ನ ಪ್ರೇಮಿ ಜಾರ್ಜನನ್ನು ಮದುವೆ ಆದಳು. ಗುಪ್ತವಾಗಿ ನಡೆದ ಮದುವೆ, ಯಾರನ್ನೂ ಕರೆದಿರಲಿಲ್ಲ. “ನನ್ನನ್ನು ನೋಡಿಕೊಳ್ಳಲು ಯಾರಾದರೂ ಬೇಡವೇ? ಅದಕ್ಕಾಗಿ, ಓರ್ವ ಸಂಗಾತಿ ಜೊತೆಗಿರಲಿ ಎಂಬ ಕಾರಣಕ್ಕಾಗಿ ಈ ವಿವಾಹ” ಎಂದು ಮಗನಿಗೆ ಹೇಳಿದಳು. ಮಗ ಕೇಳಿಸಿಕೊಳ್ಳಲೂ ಇಲ್ಲ. ಏನೋ ಕೋಪ ಅವನಿಗೆ. ಅವಳು ನನ್ನ ಮದುವೆಯಾಗಲಿ ಎಂದೇ ಕಾದಿದ್ದಳು ಎಂಬ ಗುಮಾನಿ. ಅವಳು ತನ್ನ ವಿಳಾಸ, ಫೋನ್ ನಂಬರ್ ಮತ್ತು ಇ–ಮೈಲುಗಳನ್ನು ನೀಡಿದ್ದರೂ ಸ್ಯಾಮ್ ಅವಳನ್ನು ಮತ್ತೆ ಸಂಪರ್ಕಿಸಲಿಲ್ಲ. ಹೆಂಡತಿ ತಾರಾ, ಅತ್ತೆ, ಮಾವ ಎಲ್ಲರೂ ಅವನಿಗೆ ಬುದ್ಧಿ ಹೇಳಿದರು. “ಅವರು ನಿನ್ನ ತಾಯಿ. ಅವರತ್ತ ನೀನು ಹೀಗೆ ವರ್ತಿಸಬಾರದು. ಆಗಾಗ್ಗೆ ಹೋಗಿ ನೋಡಿಕೊಂಡು ಬಾ.” ಕೆಲಕಾಲ ಜಗ್ಗಲಿಲ್ಲ ಸ್ಯಾಮ್! ಆದರೆ, ತಾಯಿಗೆ ಉಸಿರಾಟದ ತೊಂದರೆಯಾಗಿ ಆಸ್ಪತ್ರೆ ಸೇರಿದಾಗ, ತಡೆಯಲಾರದೇ ಹೋಗಿ ಅವಳನ್ನು ನೋಡಿಬಂದ. ತಾಯಿಗೆ ಎಲ್ಲಿಲ್ಲದ ಆನಂದ.

ಸ್ಯಾಮನಿಗೆ ಆಶ್ಚರ್ಯವೋ ಆಶ್ಚರ್ಯ. ಮದುವೆ ಆಗುತ್ತಿದ್ದಂತೆಯೇ ತಾರಾ ತನ್ನ ಬ್ಯಾಂಕಿನ ಕಾರ್ಡು, ಕ್ರೆಡಿಟ್ ಕಾರ್ಡ್ ಎಲ್ಲದರ ವಿವರಗಳನ್ನು ಸ್ಯಾಮನಿಗೆ ನೀಡಿ, ತನ್ನ ಪಾಸ್‌ವರ್ಡುಗಳನ್ನೂ ನೀಡಿ, “ಇನ್ನು ಇವೆಲ್ಲವನ್ನೂ ನೀನೇ ನೋಡಿಕೋಬೇಕು. ನನಗೆ ಈ ತರಲೆ ಬೇಡ. ನಾನು ಕೇಳಿದಾಗ ಕೇಳಿದಷ್ಟು ದುಡ್ಡನ್ನು ಕೊಟ್ಟರೆ ಸರಿ.” ಎಂದು ನಕ್ಕಳು. ಅವನ ತಂದೆ ತಾಯಿ ಇದಕ್ಕೆ ತದ್ವಿರುದ್ಧ. ಒಬ್ಬೊಬ್ಬರದೂ ಪ್ರತ್ಯೇಕ ಅಕೌಂಟುಗಳು, ಒಬ್ಬರ ವ್ಯವಹಾರ ಮತ್ತೊಬ್ಬರಿಗೆ ತಿಳಿಯುತ್ತಿರಲಿಲ್ಲ. ಮನೆಗೆ ಸೇರಿದ

